**ದಿನಾಂಕ: 12-07-2012 ರಂದು ತೋಟಗಾರಿಕೆ ಸ್ಥಾಯಿ ಸಮಿತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಉದ್ಯಾನವನಗಳ ನಿರ್ವಹಣೆ ಮತ್ತು ಅಭಿವೃದ್ಧಿ, ನಗರವ್ಯಾಪ್ತಿ ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆ ಹಾಗೂ ಕೆರೆಗಳ ಅಭಿವೃದ್ಧಿ ಕಾಮಗಾರಿಗೆ ಸಂಬಂಧಪಟ್ಟಂತೆ ನಡೆದ ಸಭೆಯ ನಡವಳಿಗಳು**

<table>
<tr><td colspan="3">ಹಾಜರಿದ್ದ ಸದಸ್ಯರು<br>ಶ್ರೀಯುತರಾದ :</td><td colspan="2">ಹಾಜರಿದ್ದ ಅಧಿಕಾರಿಗಳು<br>ಶ್ರೀಯುತರಾದ</td></tr>
<tr><td>1</td><td>ಶ್ರೀ.ವೈ.ಎನ್.ಅಶ್ವಥ್</td><td>ಅಧ್ಯಕ್ಷರು</td><td>1</td><td>ಕಾರ್ಯಪಾಲಕ ಅಭಿಯಂತರರುಗಳು (ಯೋಜನೆ)</td></tr>
<tr><td>2</td><td>ಶ್ರೀ.ಎನ್.ಚಂದ್ರಶೇಖರ್‌ರಾಜು</td><td>ಸದಸ್ಯರು</td><td>2</td><td>ತೋಟಗಾರಿಕೆ ಅಧೀಕ್ಷಕರುಗಳು,</td></tr>
<tr><td>3</td><td>ಶ್ರೀ.ಎಂ.ಸಿ.ಶ್ರೀನಿವಾಸ್</td><td>ಸದಸ್ಯರು</td><td></td><td></td></tr>
<tr><td>4</td><td>ಶ್ರೀಮತಿ.ಶಕುಂತಲ.ಎನ್</td><td>ಸದಸ್ಯರು</td><td></td><td></td></tr>
<tr><td>5</td><td>ಶ್ರೀಮತಿ.ನಂದಿನಿ.ಕೆ</td><td>ಸದಸ್ಯರು</td><td></td><td></td></tr>
<tr><td>6</td><td>ಶ್ರೀಮತಿ.ಲಕ್ಷ್ಮಿ</td><td>ಸದಸ್ಯರು</td><td></td><td></td></tr>
<tr><td>7</td><td>ಶ್ರೀಮತಿ.ಸರಳ</td><td>ಸದಸ್ಯರು</td><td></td><td></td></tr>
<tr><td>8</td><td>ಶ್ರೀಮತಿ.ಸೀಮಾ ಖಾನಂ</td><td>ಸದಸ್ಯರು</td><td></td><td></td></tr>
<tr><td>9</td><td>ಶ್ರೀ.ಎಮ್.ಶಿವರಾಜು</td><td>ಸದಸ್ಯರು</td><td></td><td></td></tr>
<tr><td>10</td><td>ಶ್ರೀ.ಎಸ್.ಗಂಗಾಧರ್</td><td>ಸದಸ್ಯರು</td><td></td><td></td></tr>
</table>

**(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)**

ಮಾನ್ಯ ಅಧ್ಯಕ್ಷರು ಸಭೆಯ ಅಧ್ಯಕ್ಷತೆ ವಹಿಸಿ ಸಭೆಯಲ್ಲಿ ಹಾಜರಿದ್ದ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳಿಗೆ ಹೃತ್ಪೂರ್ವಕವಾದ ಸ್ವಾಗತ ಕೋರಿದರು.

ಸಮಿತಿಯ ಮುಂದಿರುವ ವಿಷಯಗಳ ಬಗ್ಗೆ ಅಧ್ಯಕ್ಷರು, ಸಮಿತಿಯ ಸದಸ್ಯರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ, ಈ ಕೆಳಕಂಡಂತೆ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು.

1. **ವಿಷಯ ಸಂಖ್ಯೆ:ತೋ/ಸ್ಥಾ/ಸ/15/12-13, ದಿನಾಂಕ: 06-06-2012**

ತೋಟಗಾರಿಕೆ ಇಲಾಖೆ, ಪೂರ್ವ ವಿಭಾಗದ ವ್ಯಾಪ್ತಿಗೆ ಒಳಪಡುವ ವಾರ್ಡ್ ಸಂಖ್ಯೆ.111ರ ರೆಸ್ಟ್‌ಹೌಸ್ ಉದ್ಯಾನವನವನ್ನು ದತ್ತಿನ ಆಧಾರದ ಮೇಲೆ ನಿರ್ವಹಣೆ ಮಾಡಲು M/s Puravankara Project Limited. ಬೆಂಗಳೂರು ರವರಿಗೆ ಹನ್ನೊಂದು ತಿಂಗಳ ಅವಧಿಗೆ ಅನುಮತಿ ನೀಡಲಾಗಿದ್ದು, ನಿರ್ವಹಣಾ ಅವಧಿಯು ದಿನಾಂಕ:06-12-2011ಕ್ಕೆ ಮುಕ್ತಾಯಗೊಂಡಿದೆ. ಸದರಿ ಸಂಸ್ಥೆಯವರು ನಿರ್ವಹಣಾ ಅವಧಿಯನ್ನು ಮೂರು ವರ್ಷಗಳ ಅವಧಿಗೆ ನವೀಕರಿಸಲು ಕೋರಿ ದಿನಾಂಕ:31-03-2012 ರಂದು ಮನವಿ ಸಲ್ಲಿಸಿರುತ್ತಾರೆ. ಈ ಸಂಸ್ಥೆಯವರು ಸದರಿ ಉದ್ಯಾನವನವನ್ನು ಮೇಲ್ಕಂಡ ಅವಧಿಯಲ್ಲಿ ನಿಯಮ ನಿಬಂಧನೆಗಳ ರೀತ್ಯಾ, ತೃಪ್ತಿಕರವಾಗಿ ನಿರ್ವಹಣೆ ಮಾಡಿರುತ್ತಾರೆ. ಆದುದರಿಂದ, ಪಾಲಿಕೆಯ ನಿಯಮಗಳ ರೀತ್ಯಾ ನಿರ್ವಹಣಾ ದತ್ತಿನ ಅವಧಿಯನ್ನು ಮೂರು ವರ್ಷಗಳಿಗೆ ನವೀಕರಿಸಲು ಅನುಮತಿ ನೀಡುವ ಕುರಿತು, ತೋಟಗಾರಿಕೆ

**ಮುಂದುವರೆದಿದೆ. . . .**

ಸ್ಥಾಯಿ ಸಮಿತಿಯ ಮುಂದೆ ಅನುಮೋದನೆ ಕೋರಿ ಮಂಡಿಸಲಾದ ಮಾನ್ಯ ಆಯುಕ್ತರ ದಿನಾಂಕ: 14–05–2012 ರ ಟಿಪ್ಪಣಿ.

**<u>ನಿರ್ಣಯ</u>:– ಸಮಿತಿಯು ಸ್ಥಳ ಪರಿಶೀಲನೆ ಮಾಡಲಾಗಿದ್ದು, ದಿನಾಂಕ:14–05–2012ರ ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

*2. ವಿಷಯ ಸಂಖ್ಯೆ:ತೋ/ಸ್ಥಾ/ಸ/17/12–13, ದಿನಾಂಕ: 01–07–2012*

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ರಾಜರಾಜೇಶ್ವರಿ ನಗರ ವಲಯ, ವಾರ್ಡ್ ನಂ.129ರ ಜ್ಞಾನ ಭಾರತಿ ವ್ಯಾಪ್ತಿಯಲ್ಲಿ ಸನ್ಮಾನ್ಯ ಗೃಹ ಮತ್ತು ಸಾರಿಗೆ ಸಚಿವರು, ಕರ್ನಾಟಕ ಸರ್ಕಾರ ರವರು ಪಿ–2434 Development work for Bangalore City ಲೆಕ್ಕಶೀರ್ಷಿಕೆಯಲ್ಲಿ ಅನುದಾನ ಬಿಡುಗಡೆಗೊಳಿಸಲು ಸೂಚಿಸಿದ್ದು, ಅದರಂತೆ, ಈ ಕೆಳಕಂಡ ಕಾಮಗಾರಿಗಳಿಗೆ ಜಾಬ್ ಸಂಖ್ಯೆ ಪಡೆಯಲಾಗಿರುತ್ತದೆ.

| ಕ್ರ.ಸಂ. | ಕಾಮಗಾರಿ ವಿವರ | ಅಂದಾಜು ವೆಚ್ಚ | ಜಾಬ್ ಸಂಖ್ಯೆ |
|---|---|---|---|
| 1. | Chain link fencing at BHEL Layout park in Ward No.129 RRN Zone. | 50.00 | 129–12–000074 |
| 2. | Development of NGEF Layout park in Ward No.129 RRN Zone. | 50.00 | 129–12–000073 |

ಮೇಲ್ಕಂಡ ಕಾಮಗಾರಿಗಳನ್ನು ನಿರ್ವಹಿಸಲು ಪೂಜ್ಯ ಮಹಾಪೌರರ ಟಿಪ್ಪಣಿ ಪತ್ರದಂತೆ, ಸದರಿ ಉದ್ಯಾನವನಗಳನ್ನು ಪಟ್ಟಭದ್ರಹಿತಾಸಕ್ತಿಗಳು ಒತ್ತುವರಿ ಮಾಡಿಕೊಳ್ಳುವ ಸಂಭವ ಹೆಚ್ಚಾಗಿರುವುದರಿಂದ, ಜರೂರಾಗಿ ತಂತಿಬೇಲಿ ಹಾಕುವುದು ಅತ್ಯಾವಶ್ಯಕವಾಗಿದ್ದು, ಈ ಹಿನ್ನೆಲೆಯಲ್ಲಿ ಈ ಕಾಮಗಾರಿ ತುರ್ತಿನ ಸ್ವರೂಪವಾಗಿದ್ದು, ಸಾರ್ವಜನಿಕ ಹಿತದೃಷ್ಠಿಯಿಂದ ತುರ್ತಾಗಿ ಕಾಮಗಾರಿಯನ್ನು ಪೂರ್ಣಗೊಳಿಸುವುದು ಅವಶ್ಯಕವಾಗಿರುವುದರಿಂದ, ಈ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆ ಮುಖೇನ ಕೈಗೆತ್ತಿಕೊಂಡು ಪೂರ್ಣಗೊಳಿಸಲು ಆದೇಶಿಸಿರುತ್ತಾರೆ.

ಆದರಂತೆ, ಮಾನ್ಯ ಆಯುಕ್ತರವರು, ಮೇಲ್ಕಂಡ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆ ಮೂಲಕ ನಿರ್ವಹಿಸಲು ವಿಷಯವನ್ನು ಸಂಬಂಧಿಸಿದ ಸ್ಥಾಯಿ ಸಮಿತಿ ಮುಂದೆ ಮಂಡಿಸಲು ಆದೇಶಿಸಿರುವುದರಿಂದ, ಸದರಿ ಕಾಮಗಾರಿಗಳಿಗೆ ಅನುಮೋದನೆ ಕೋರಿ, ತೋಟಗಾರಿಕೆ ಸ್ಥಾಯಿ

**ಮುಂದುವರೆದಿದೆ. . . . .**

ಸಮಿತಿಯ ಮುಂದೆ ಮಂಡಿಸಲಾದ ಅಪರ ಆಯುಕ್ತರು (ಯೋಜನೆ)ರವರ ದಿನಾಂಕ:28-06-2012 ರ ಟಿಪ್ಪಣಿ.

**<u>ನಿರ್ಣಯ:-</u> ದಿನಾಂಕ:28-06-2012ರ ಮಾನ್ಯ ಅಪರ ಆಯುಕ್ತರು(ಯೋಜನೆ)ರವರ ಟಿಪ್ಪಣಿಯಂತೆ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್.ಸಂಸ್ಥೆಯ ಮೂಲಕ ನಿರ್ವಹಿಸಲು ಸಮಿತಿಯು ಒಪ್ಪಿದೆ.**

**3. <u>ವಿಷಯ ಸಂಖ್ಯೆ:ತೋ/ಸ್ಥಾ/ಸ/18/12-13, ದಿನಾಂಕ: 11-07-2012</u>**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯ, ವಾರ್ಡ್ ನಂ.16ರ ಜಾಲಹಳ್ಳಿ ವ್ಯಾಪ್ತಿಯ ಸಿದ್ದಾರ್ಥನಗರದ ಆಟದ ಮೈದಾನ, ಉದ್ಯಾನವನ ಅಭಿವೃದ್ಧಿ ಕಾಮಗಾರಿಯನ್ನು ಲೆಕ್ಕಶೀರ್ಷಿಕೆ ಪಿ-2274 Development work in Rajarajeshwari Nagara Assembly Constituency ಯೋಜನೆಯಡಿಯಲ್ಲಿ ಅನುದಾನ ಬಿಡುಗಡೆಗೊಳಿಸಿದ್ದು, ಈ ಕೆಳಕಂಡ ಕಾಮಗಾರಿಗಳಿಗೆ ಜಾಬ್ ಸಂಖ್ಯೆ ನೀಡಲಾಗಿರುತ್ತದೆ.

| ಕ್ರ.ಸಂ. | ಕಾಮಗಾರಿ ವಿವರ | ಅಂದಾಜು ವೆಚ್ಚ | ಜಾಬ್ ಸಂಖ್ಯೆ |
|---|---|---|---|
| 1. | Development of Park and Play Ground at Ward No.16, R.R.N. Zone. | **50.00** | **16-12-000045** |

ಮೇಲ್ಕಂಡ ಕಾಮಗಾರಿಗಳನ್ನು ತುರ್ತಾಗಿ ನಿರ್ವಹಿಸಲು, ಮಾನ್ಯ ಅಧ್ಯಕ್ಷರು, ತೋಟಗಾರಿಕೆ ಸ್ಥಾಯಿ ಸಮಿತಿರವರ ಟಿಪ್ಪಣಿ ಪತ್ರದಂತೆ, ವಾರ್ಡ್ ನಂ.16, ಜಾಲಹಳ್ಳಿ, ಸಿದಾರ್ಥನಗರದ ಉದ್ಯಾನವನ ಮತ್ತು ಆಟದ ಮೈದಾನ ಪ್ರದೇಶವನ್ನು ಕೆಲವು ಪಟ್ಟಭದ್ರಹಿತಾಸಕ್ತ ವ್ಯಕ್ತಿಗಳಿಂದ ಕಬಳಿಸಲು ಪ್ರಯತ್ನಿಸುತ್ತಿದ್ದು, ಈ ಪ್ರದೇಶಕ್ಕೆ ಸೂಕ್ತ ರಕ್ಷಣೆ ನೀಡುವ ನಿಟ್ಟಿನಲ್ಲಿ ತುರ್ತಾಗಿ ಕಾಮಗಾರಿಯನ್ನು ಕೈಗೊಳ್ಳುವ ಉದ್ದೇಶದಿಂದ, ಕೆ.ಆರ್.ಐ.ಡಿ.ಎಲ್. ಸಂಸ್ಥೆ ಮುಖೇನ ಕೈಗೆತ್ತಿಕೊಂಡು ಅತಿ ಶೀಘ್ರದಲ್ಲಿ ಪೂರ್ಣಗೊಳಿಸುವಂತೆ, ಮಾನ್ಯ ಶಾಸಕರು, ರಾಜರಾಜೇಶ್ವರಿನಗರ ಕ್ಷೇತ್ರರವರ ಮನವಿ ಪತ್ರವನ್ನು ಪರಿಗಣಿಸಿ, ಸಂಬಂಧಿಸಿದ ಅಧಿಕಾರಿಗಳಿಗೆ ಕಾರ್ಯಪ್ರವೃತ್ತರಾಗುವಂತೆ ಆದೇಶ ನೀಡಲು ದಿನಾಂಕ: 14-06-2012 ರಲ್ಲಿ ಮಾನ್ಯ ಆಯುಕ್ತರನ್ನು ಕೋರಿರುತ್ತಾರೆ.

ಆದುದರಿಂದ, ಮೇಲ್ಕಂಡ ಉದ್ಯಾನವನ ಮತ್ತು ಆಟದ ಮೈದಾನ ಪ್ರದೇಶಕ್ಕೆ ಸೂಕ್ತ ರಕ್ಷಣೆ ನೀಡುವ ಉದ್ದೇಶದಿಂದ ಸದರಿ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆ ಮುಖೇನ

**ಮುಂದುವರೆದಿದೆ. . . . .**

ಕೈಗೊಳ್ಳಲು ಅನುಮೋದನೆ ಕೋರಿ, ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ಅಪರ ಆಯುಕ್ತರು (ಯೋಜನೆ)ರವರ ದಿನಾಂಕ:09–07–2012 ರ ಟಿಪ್ಪಣಿ.

**<u>ನಿರ್ಣಯ:–</u> ದಿನಾಂಕ:09–07–2012ರ ಮಾನ್ಯ ಅಪರ ಆಯುಕ್ತರು(ಯೋಜನೆ)ರವರ ಟಿಪ್ಪಣಿಯಂತೆ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮೂಲಕ ನಿರ್ವಹಿಸಲು ಸಮಿತಿಯು ಒಪ್ಪಿದೆ.**

ಕೊನೆಯದಾಗಿ, ಈ ಸಭೆಯಲ್ಲಿ ಮೇಲಿನ ವಿಷಯದ ಬಗ್ಗೆ ಹಾಜರಿದ್ದ ಅಧಿಕಾರಿಗಳ ಜೊತೆ ಸಮಿತಿ ಸದಸ್ಯರ ಜೊತೆಗೂಡಿ ನಿರ್ಣಯ ತೆಗೆದುಕೊಳ್ಳಲಾಯಿತು. ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಅಧ್ಯಕ್ಷರು
ತೋಟಗಾರಿಕೆ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**<u>ಪ್ರತಿಯನ್ನು:-</u>**

- ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಆಡಳಿತ ಪಕ್ಷ / ವಿರೋಧ ಪಕ್ಷ ಮತ್ತು ಜೆಡಿಎಸ್ ಪಕ್ಷದ ನಾಯಕರುಗಳಿಗೆ ಕಳುಹಿಸಿದೆ.
- ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಕೋರಿದೆ.
- *ವಿಶೇಷ ಆಯುಕ್ತರು(ಯೋಜನೆ) ರವರ ಗಮನಕ್ಕೆ ತರಲಾಗಿದೆ.*
- *ಅಪರ ಆಯುಕ್ತರು(ಯೋಜನೆ)ರವರ ಗಮನಕ್ಕೆ ತರಲಾಗಿದೆ.*
- ಎಲ್ಲಾ ಸ್ಥಾಯಿ ಸಮಿತಿ ಅಧ್ಯಕ್ಷರುಗಳಿಗೆ ಕಳುಹಿಸಲಾಗಿದೆ.
- ಸಮಿತಿಯ ಸದಸ್ಯರುಗಳಿಗೆ ಕಳುಹಿಸಲಾಗಿದೆ.
- ಪ್ರಧಾನ ಅಭಿಯಂತರವರಿಗೆ ಕಳುಹಿಸಲಾಗಿದೆ.
- ಅರಣ್ಯ ಸಂರಕ್ಷಣಾಧಿಕಾರಿಯವರಿಗೆ ಕಳುಹಿಸಲಾಗಿದೆ.
- ಮುಖ್ಯ ಲೆಕ್ಕಾಧಿಕಾರಿಗಳಿಗೆ ಕಳುಹಿಸಲಾಗಿದೆ.
- ಉಪ /ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು(ಉತ್ತರ–ದಕ್ಷಿಣ) ರವರಿಗೆ ಕಳುಹಿಸಲಾಗಿದೆ.
- ಕಾರ್ಯಪಾಲಕ ಅಭಿಯಂತರರು(ಯೋಜನೆ) ರವರಿಗೆ ಕಳುಹಿಸಲಾಗಿದೆ.
- ತೋಟಗಾರಿಕೆ ಅಧೀಕ್ಷಕರು (ಪೂರ್ವ/ ಪಶ್ಚಿಮ/ ದಕ್ಷಿಣ/ ರಾಜರಾಜೇಶ್ವರಿನಗರ/ ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ) ರವರಿಗೆ ಕಳುಹಿಸಲಾಗಿದೆ.
- ಕಛೇರಿ ಪ್ರತಿ.

**ಮುಂದುವರೆದಿದೆ. . . .**